**2 ನೇ ಆಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಳ್ಳಾರಿ**

**ಸತ್ರ ಮೊಕದ್ದಮೆ ಸಂಖ್ಯೆ: 71/2025**

ಪಿ.ಡಬ್ಲುಃ 1 ಸಿಡಬ್ಲುಃ 1

| | | |
|---|---|---|
| ಸಾಕ್ಷಿಯ ಹೆಸರು | : | ಅಕ್ಕಮ್ಮ |
| ಗಂಡನ ಹೆಸರು | : | ರೆಡ್ಡೆಪ್ಪ |
| ವಯಸ್ಸು | : | 40 ವರ್ಷ |
| ವೃತ್ತಿ | : | ಬಳೆ ವ್ಯಾಪಾರ |
| ವಾಸಸ್ಥಳ | : | ಬಳ್ಳಾರಿ |

ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ 17.06.2026.

**ಮುಖ್ಯ ವಿಚಾರಣೆ ಮಾನ್ಯ ಸಾರ್ವಜನಿಕ ಅಭಿಯೋಜಕರಿಂದಃ-**

1) ನಾನು ಬಳ್ಳಾರಿ ನಗರದ ತಾಳೂರು ರಸ್ತೆಯಲ್ಲಿರುವ ಭಗತ್ ಸಿಂಗ್ ನಗರದಲ್ಲಿ ವಾಸ ಇದ್ದೇನೆ. ನನ್ನ ಜೊತೆ ನನ್ನ ತಾಯಿ, ಚಾಸಾ-4 ಸಹ ವಾಸವಿದ್ದಾರೆ. ನನಗೆ ಚಾಸಾ-5 ರಂದ 7 ರವರ ಪರಿಚಯವಿದೆ. ಸದರಿಯವರ ಮನೆಗಳು ನನ್ನ ಮನೆಯ ಹತ್ತಿರ ಇದೆ. ನನಗೆ ಆರೋಪಿ 1 ರಿಂದ 4 ರವರ ಪರಿಚಯವಿದೆ. ಅವರುಗಳು ನಮ್ಮ ಏರಿಯಾದಲ್ಲಿ ವಾಸವಿದ್ದಾರೆ. ನಾನು ಬಳೆ ವ್ಯಾಪಾರ ಮಾಡುತ್ತೇನೆ. ನನಗೆ ಇಬ್ಬರು ಗಂಡು ಮಕ್ಕಳು ಇದ್ದಾರೆ. ಒಬ್ಬ ಮಗ ತಿರುಪತಿಯಲ್ಲಿ ವಾಸವಿದ್ದಾನೆ. ಇನ್ನೊಬ್ಬ ಸಾಲುಹುಣಸೆ ಮರ ಗ್ರಾಮದಲ್ಲಿ ವಾಸವಿದ್ದಾನೆ. ಅವರಿಬ್ಬರು ಮದುವೆಯಾಗಿದೆ. ನನ್ನ ಗಂಡನೂ ಸಹ ಸಾಲುಹುಣಸೆ ಮರದಲ್ಲಿ ನನ್ನ ಮಗನ ಜೊತೆ ವಾಸವಿದ್ದಾರೆ.

2) 4 ನೇ ಆರೋಪಿ ಶಾಂತಮ್ಮನ ಮನೆಯ ಬಳಿ ನಾನು ಒಂದು ಸಣ್ಣ ಗುಡಿಸಲನ್ನು ಖರೀದಿ ಮಾಡಿದ್ದರಿಂದ ಶಾಂತಮ್ಮ ಮತ್ತು ಅವಳ ಮಕ್ಕಳು ವಿನಾಃ ಕಾರಣ ನನ್ನ ಮೇಲೆ ದ್ವೇಷ ಮಾಡುತ್ತಾ ನನಗೆ ಬೈದಾಡುತ್ತಿದ್ದರು. ಅವರು ಬೈಯುತ್ತಿದ್ದರು ಸಹ ನಾನು ಸುಮ್ಮನಾಗುತ್ತಿದ್ದೆ. 2024 ರಲ್ಲಿ ಒಂದು ದಿವಸ ಮುಂಜಾನೆ 9 ಗಂಟೆಗೆ ನಾನು ನಮ್ಮ ಮನೆಯ ಮುಂದೆ ಇರುವ ಕಾಲುವೆ ಹತ್ತಿರ ಬಟ್ಟೆ ಒಗೆಯುತ್ತಿದ್ದಾಗ ನನಗೆ ನನ್ನ ಸೊಸೆ ಫೋನ್ ಮಾಡಿದ್ದರಿಂದ ನಾನು ಅವಳ ಜೊತೆ ಮಾತನಾಡುತ್ತಿದ್ದೆ. ನನ್ನ ಸೊಸೆ ನನಗೆ ಹಣ ಕೇಳಿದ್ದರಿಂದ ನಾನು ಅವಳಿಗೆ

ಫೋನಿನಲ್ಲಿ ಬೈಯುತ್ತಾ ಮಾತನಾಡುತ್ತಿದ್ದೆ. ಆರೋಪಿ 3 ಮತ್ತು 4 ರವರು ಅಲ್ಲಿಗೆ ಬಂದು ನಮಗೆ ಏಕೆ ಬೈಯುತ್ತೀಯಾ ಎಂದು ಕೇಳಿದರು. ನನಗೆ ಅವಾಚ್ಯ ಶಬ್ದಗಳಿಂದ ಬೈದರು. ನಂತರ ಆರೋಪಿ 1 ಮತ್ತು 2 ರವರು ಸಹ ಬಂದರು. ಆರೋಪಿತರು ನನಗೆ ಬಜಾರಿ ಎಂದು, ಚಿಕ್ಕ ಚಿಕ್ಕ ಹುಡುಗರ ಜೊತೆ ಮಲಗುತ್ತಾಳೆ ಎಂದು ಮತ್ತು ಇವಳನ್ನು ಈ ಏರಿಯಾದಿಂದ ಖಾಲಿ ಮಾಡಿಸಬೇಕು ಎಂದು ಹೇಳಿ ಬೈದರು. 1 ನೇ ಆರೋಪಿಯು ನಾನು ಬಟ್ಟೆ ಒಗಿಯುತ್ತಿದ್ದಾಗ ನನ್ನನ್ನ ಹಿಂದಿನಿಂದ ಹಿಡಿದುಕೊಂಡು ಮೇಲಕ್ಕೆ ಎಳೆದುಕೊಂಡು ಬಂದ. 4 ನೇ ಆರೋಪಿಯು ನನಗೆ ಕೈಯಿಂದ ಕಪಾಳಕ್ಕೆ ಹೊಡೆದಳು. ಆರೋಪಿ 2 ಮತ್ತು 3 ರವರು ನನಗೆ ಕಟ್ಟಿಗೆಯಿಂದ ಹೊಡೆದರು. ಚಾಸಾ-2, 4, 5 ಮತ್ತು 6 ರವರು ಅಲ್ಲಿಗೆ ಬಂದು ನನ್ನನ್ನು ಬಿಡಿಸಿಕೊಂಡರು.

**3)** ಆರೋಪಿತರು ನನ್ನ ಮೇಲೆ ಹಲ್ಲೆ ಮಾಡಿದ್ದರಿಂದ ಗಾಯಗೊಂಡು ನಾನು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದೆ. ನಂತರ ನಾನು ನನ್ನ ಗಂಡ ಮತ್ತು ಮಕ್ಕಳಿಗೆ ವಿಷಯವನ್ನು ತಿಳಿಸಿದ್ದೆ. ಘಟನೆ ನಡೆದ ಮೂರು ದಿವಸಗಳ ನಂತರ ನಾನು ಗಾಂಧಿನಗರ ಪೊಲೀಸ್ ಠಾಣೆಯಲ್ಲಿ ದೂರು ಕೊಟ್ಟಿದ್ದೆ. ಸಾಕ್ಷಿಯ ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಎಂದು ಅದರಲ್ಲಿಯ ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

**4)** ನಂತರ ಪೊಲೀಸರು ಘಟನೆ ಸ್ಥಳಕ್ಕೆ ಬಂದು ಪಂಚನಾಮೆಯನ್ನು ಮಾಡಿದ್ದರು ಮತ್ತು ನಕಾಶೆಯನ್ನು ತಯಾರಿಸಿದ್ದರು. ಪಂಚನಾಮೆ ಮತ್ತು ನಕಾಶೆಯನ್ನು ನಿಪಿ-2 ಮತ್ತು 3 ಎಂದು ಗುರುತಿಸಲಾಯಿತು. ಅದರಲ್ಲಿಯ ಸಾಕ್ಷಿಯ ಸಹಿಗಳನ್ನು ನಿಪಿ-2(ಎ) ಮತ್ತು ನಿಪಿ-3(ಎ) ಎಂದು ಗುರುತಿಸಲಾಯಿತು. ಪೊಲೀಸರು ಪಂಚನಾಮೆ ಸಮಯದಲ್ಲಿ ಪೊಟೋ ಮತ್ತು ವಿಡಿಯೋಗಳನ್ನು ಮಾಡಿದ್ದರು. ಸಾಕ್ಷಿ ಗುರುತಿಸಿದ್ದ ಭಾವಚಿತ್ರವನ್ನು ನಿಪಿ-4 ಎಂದು ಗುರುತಿಸಲಾಯಿತು. ಆರೋಪಿತರನ್ನು ನೋಡಿದರೆ ನಾನು ಗುರುತಿಸುತ್ತೇನೆ. ಈ ದಿವಸ ಆರೋಪಿತರು ಗೈರು ಹಾಜರಿದ್ದು ಅವರ ಗುರುತಿನ ಬಗ್ಗೆ ತಕರಾರು ಇಲ್ಲ ಆರೋಪಿತರ ಪರ ವಕೀಲರು ತಿಳಿಸಿರುತ್ತಾರೆ ಮತ್ತು ಇಪಿ ಸಲ್ಲಿಸಿರುತ್ತಾರೆ.

<u>ಪಾಟೀಸವಾಲು ಆರೋಪಿ ಪರವಾಗಿ ಶ್ರೀ ವೈ.ಕೆ. ವಕೀಲರಿಂದಃ</u>

5) ನಾನು ಬಳೆ ವ್ಯಾಪಾರ ಮಾಡುತ್ತೇನೆ. ನಾನು ವಿದ್ಯಾಭ್ಯಾಸ ಮಾಡಿಲ್ಲ. ನನಗೆ ಈ ಪ್ರಕರಣದ ಬಗ್ಗೆ ಮಾಹಿತಿ ಇದೆ. ಪೊಲೀಸರು ಠಾಣೆಯಲ್ಲಿ ದೂರನ್ನು ನಾನು ಹೇಳಿದಂತೆ ಬೆರಳಚ್ಚು ಮಾಡಿಸಿ ನನಗೆ ಓದಿ ಹೇಳಿ ನನ್ನ ಸಹಿಯನ್ನು ಪಡೆದುಕೊಂಡಿದ್ದರು. ಕನ್ನಡದಲ್ಲಿ ದೂರನ್ನು ಬೆರಳಚ್ಚು ಮಾಡಿದ್ದರು. ನಮ್ಮ ಮನೆಯಿಂದ ಪೊ.ಠಾಣೆ ಸುಮಾರು 1 ಕಿ.ಮೀ ದೂರದಲ್ಲಿ ಇದೆ. ಘಟನೆ ಆದ ನಾಲ್ಕು ದಿವಸದ ನಂತರ ನಾನು ದೂರು ಕೊಟ್ಟಿದ್ದೆ. ನಾನು ಆಸ್ಪತ್ರೆಗೆ ತೋರಿಸಿಕೊಂಡಿದ್ದರಿಂದ ದೂರು ಕೊಡಲು ತಡವಾಗಿತ್ತು. ಈ ಬಗ್ಗೆ ನಾನು ದೂರಿನಲ್ಲಿ ಬರೆಸಿಲ್ಲ. 4 ನೇ ಆರೋಪಿ ನನ್ನ ವಿರುದ್ಧ ದೂರು ಕೊಟ್ಟಿದ್ದರು ಎಂದರೆ ಸರಿ.

6) ಎರಡು ಮೂರು ಸಾರಿ ಆರೋಪಿತರು ನನ್ನ ಮೇಲೆ ಜಗಳಕ್ಕೆ ಬಂದಿದ್ದರು. ಮುಂಜಾನೆ 08.45 ರ ಸಮಯದಲ್ಲಿ ನಾನು ಆ ದಿವಸ ನನ್ನ ಸೊಸೆಗೆ ಪೋನ್ ಮಾಡಿದ್ದೆ. ನನ್ನ ಮೊಬೈಲ್ ಪೋನಿಂದ ಪೋನ್ ಮಾಡಿದ್ದೆ. ಪೋನ್ ನಂಬರನ್ನು ದೂರಿನಲ್ಲಿ ನಾನು ಬರೆಸಿಲ್ಲ. ನಮ್ಮ ಮನೆ ಇರುವ ಏರಿಯಾ ಸಂಸ್ಕಾರವಂತರ ಏರಿಯಾ ಎಂದರೆ ಸರಿ. ನಾನು ಆರೋಪಿತರಿಗೆ ಅವಾಚ್ಯ ಶಬ್ದಗಳಿಂದ ಬೈದಾಡುತ್ತಿದ್ದೆ ಎಂದರೆ ಸರಿಯಲ್ಲ. ಆರೋಪಿತರಿಗು ಮತ್ತು ನನಗೂ ಬಹಳ ವರ್ಷಗಳಿಂದ ವಾಜ್ಯ ಇದ್ದುದರಿಂದ ಆರೋಪಿತರು ನನಗೆ ಅವರನ್ನು ವಿನಾಃ ಕಾರಣ ಏಕೆ ಬೈಯುತ್ತಿದ್ದಿಯಾ ಎಂದು ಕೇಳಿದ್ದರು ಎಂದರೆ ಸರಿಯಲ್ಲ.

7) ನಾನು ಪೋನಿನಲ್ಲಿ ಅಶ್ಲೀಲವಾಗಿ ಸುತ್ತಮುತ್ತಲು ಜನ ಇದ್ದರು ಸಹ ಜನರನ್ನು ಉದ್ದೇಶಿಸಿ ಬೈಯುತ್ತಿದ್ದೆ ಎಂದರೆ ಸರಿಯಲ್ಲ. ನನ್ನ ಮನೆಯ ಸುತ್ತಮುತ್ತಲಿನ ಮನೆಯವರು ಸಹ ನನಗೆ ಆ ರೀತಿ ಬೈಯಬಾರದು ಎಂದು ಹೇಳಿದ್ದರು ಎಂದರೆ ಸರಿಯಲ್ಲ. ಘಟನೆ ನಡೆದ ಸ್ಥಳದ ಪೂರ್ವಕ್ಕೆ ಐರಾನ್ ಬ್ರಿಡ್ಜ್ ಮತ್ತು ಪಶ್ಚಿಮಕ್ಕೆ ರಸ್ತೆ ಇದೆ. ನನ್ನ ಸಹಿಯನ್ನು ಗಾಂಧಿನಗರ ಪೊಲೀಸ್ ಠಾಣೆಯಲ್ಲಿ ಸಂಜೆ ಪಡೆದಿದ್ದರು. ದೂರನ್ನು ಪಿ.ಎಸ್.ಐ ರವರು ಪಡೆದಿದ್ದರು. ನಿಪಿ-4 ಪೊಟೋವನ್ನು ಜಗಳ ಆದ ಸ್ಥಳದಲ್ಲಿ ತೆಗೆಯಲಾಗಿತ್ತು. ಆರೋಪಿತರು ನನಗೆ ಯಾವುದೇ ರೀತಿಯಿಂದ ಬೈದಿಲ್ಲ ಮತ್ತು ನನ್ನ ಮಾನಹಾನಿ ಮಾಡಿಲ್ಲ ಮತ್ತು ನನಗೆ ದೈಹಿಕ ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿತರ ಮೇಲಿನ ದ್ವೇಷದಿಂದ ಅವರ ವಿರುದ್ಧ ಸುಳ್ಳು ದೂರು ನೀಡಿದ್ದೇನೆ ಎಂದರೆ ಸರಿಯಲ್ಲ.

8) ನಮ್ಮ ಏರಿಯಾದಲ್ಲಿ ಸಿ.ಸಿ ಕ್ಯಾಮೆರಾ ಇದೆ ಎಂದರೆ ಸರಿ. ಆರೋಪಿತರು ನನಗೆ ಅವಾಚ್ಯ ಶಬ್ದಗಳಿಂದ ಬೈದಿಲ್ಲ ಎಂದರೆ ಸರಿಯಲ್ಲ. ನಮ್ಮ ಏರಿಯಾದ ಜನರು ನನ್ನ ವಿರುದ್ಧ ಗಾಂಧಿನಗರ ಪೊಲೀಸ್ ಠಾಣೆಯಲ್ಲಿ ದೂರುಗಳನ್ನು ಕೊಟ್ಟಿದ್ದರು ಎಂದರೆ ಸರಿಯಲ್ಲ. ನನ್ನ ಮತ್ತು 4 ನೇ ಆರೋಪಿಯ ಅಕ್ಕಪಕ್ಕದಲ್ಲಿರುವ ಮನೆಯವರ ಜೊತೆ 2 ವರ್ಷದ ಹಿಂದೆ ಜಗಳ ಆಗಿತ್ತು ಎಂದರೆ ಸರಿಯಲ್ಲ. 2 ವರ್ಷಗಳ ಹಿಂದೆ ಗಾಂಧಿನಗರ ಪೊಲೀಸರು ನನನ್ನು ಠಾಣೆಗೆ ಕರೆಯಿಸಿ ಆ ರೀತಿ ಅಕ್ಕಪಕ್ಕದವರ ಜೊತೆ ಜಗಳ ಆಡಬೇಡ ಎಂದು ಬುದ್ದಿವಾದ ಹೇಳಿ ನನ್ನಿಂದ ಬಾಂಡ್ ಬರೆಸಿಕೊಂಡಿದ್ದರು ಎಂದರೆ ಸರಿಯಲ್ಲ.

9) ಆರೋಪಿತರು ನನ್ನ ಮಕ್ಕಳಿಗೆ ಫೋನ್ ಮಾಡಿ ನಾನು ಅವರಿಗೆ ವಿನಾಃ ಕಾರಣ ತೊಂದರೆ ಕೊಡುತ್ತಿದ್ದೇನೆ ಎಂದು ಹೇಳಿ ಅವರು ಬಂದು ನನಗೆ ಬುದ್ಧಿವಾದ ಹೇಳಬೇಕೆಂದು ಹೇಳಿದ್ದರು ಎಂದರೆ ಸರಿಯಲ್ಲ. ನಾನು ಎಲ್ಲರ ಜೊತೆ ಜಗಳವಾಡುತ್ತಿದ್ದ ಕಾರಣ ನನ್ನ ಮಕ್ಕಳು ನನ್ನ ಜೊತೆ ವಾಸವಿಲ್ಲ ಎಂದರೆ ಸರಿಯಲ್ಲ. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿರುವಂತಹ ಯಾವುದೇ ಘಟನೆ ನಡೆದಿಲ್ಲ ಎಂದರೆ ಸರಿಯಲ್ಲ. ಆರೋಪಿತರಿಗೆ ತೊಂದರೆ ಕೊಡುವ ಉದ್ದೇಶದಿಂದ ನಾನು ಅವರ ವಿರುದ್ದ ಸುಳ್ಳು ದೂರು ನೀಡಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

10) 4 ವರ್ಷದ ಹಿಂದೆ ನಾನು ಬೇರೆ ಏರಿಯದಲ್ಲಿ ವಾಸವಿದ್ದಾಗಲೂ ಸಹ ಅಲ್ಲಿಯೂ ಗಲಾಟೆ ಮಾಡಿಕೊಂಡು ಅದನ್ನು ಬಿಟ್ಟು ಆರೋಪಿತರ ಮನೆಯ ಬಳಿ ಬಂದು ವಾಸವಿದ್ದೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ. ಸರಿ ಇದೆ.

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬಳ್ಳಾರಿ.